









ಮೈಸೂರಿಗೆ ಸಂಬಂಧಿಸಿದ ಪಿಕ್ಚರ್ ಕಾರ್ಡ್‌ಗಳನ್ನು ಮೊದಲು ಮುದ್ರಿಸಿ ಬಳಕೆಗೆ ತಂದವರು ವಿದೇಶಿಯರು. ದಕ್ಷಿಣ ಭಾರತದಲ್ಲಿ ಪ್ರಕಟಣಾ ಸಂಸ್ಥೆಯಾಗಿದ್ದ 'ಹಿಗ್ಗಿನ್ ಬಾಥಮ್ಸ್', ಬೆಂಗಳೂರಿನ 'ವೇಲ್ಸ್' ಸಂಸ್ಥೆಗಳು ಪಿಕ್ಚರ್ ಕಾರ್ಡ್‌ಗಳಲ್ಲಿ ಮೈಸೂರನ್ನು 1905ರ ಸುಮಾರಿಗೆ ಪರಿಚಯಿಸಿದವು.

ಚಾಮುಂಡಿ ಬೆಟ್ಟ, ಅಂಬಾ ವಿಲಾಸ ಅರಮನೆ, ದಸರಾ ಮೆರವಣಿಗೆ ಪಿಕ್ಚರ್ ಕಾರ್ಡ್‌ಗಳಲ್ಲಿ ಮೊದಲಿಗೆ ಕಾಣಿಸಿಕೊಂಡ ಚಿತ್ರಗಳು. ಶುರುವಿನಲ್ಲಿ ಬಂದ ಬಹುತೇಕ ಕಾರ್ಡ್‌ಗಳು ಕಪ್ಪು ಬಿಳುಪು. ಈ ಚಿತ್ರಗಳನ್ನು ತೆಗೆದವರು ವಿದೇಶೀಯರು. ಕಾರ್ಡುಗಳು ಮೊದಲು ಮುದ್ರಣಗೊಂಡಿದ್ದು ಮುದ್ರಣ ಕಲೆಗೆ ಹೆಸರಾಗಿದ್ದ ಜರ್ಮನಿಯಲ್ಲಿ. ಇದಕ್ಕೆ ಇನ್ನೊಂದು ಕಾರಣ, ಕಡಿಮೆ ಖರ್ಚು ಮತ್ತು ಒಳ್ಳೆಯ ಗುಣಮಟ್ಟ.

ಮೊದಲಿಗೆ ಕಪ್ಪು ಬಿಳುಪಿನಲ್ಲಿ ಮೂಡಿಬರುತ್ತಿದ್ದ ಮೈಸೂರಿನ ಪಿಕ್ಚರ್ ಪೋಸ್ಟ್ ಕಾರ್ಡ್‌ಗಳು 1930ರ ನಂತರ ವರ್ಣದಲ್ಲಿ ಮುದ್ರಿತವಾಗತೊಡಗಿದವು. ಅರಮನೆಯ ಆಚರಣೆಗಳು, ಮೈಸೂರಿನ ಆಕರ್ಷಕ ತಾಣಗಳು, ಆಗಿನ ಆಳುವ ಪ್ರಭುಗಳ ಚಿತ್ರಗಳು ಪಿಕ್ಚರ್ ಪೋಸ್ಟ್ ಕಾರ್ಡ್‌ಗಳಲ್ಲಿ ಮುದ್ರಣವಾಗುತ್ತಿದ್ದವು. ವಿದೇಶದಲ್ಲಿ ಮುದ್ರಣವಾಗುತ್ತಿದ್ದ ಕಾರ್ಡ್‌ಗಳು ಕ್ರಮೇಣ ಮೈಸೂರಿನ ಮುದ್ರಣಾಲಯಗಳಲ್ಲಿ ಸಿದ್ಧವಾಗತೊಡಗಿದವು. ಎ.ವಿ. ವರದಾಚಾರ್ ಅಂಡ್ ಸನ್, ಶಂಕರ್ ಅಂಡ್ ಕೋ ಸಂಸ್ಥೆಗಳು ಸ್ಥಳೀಯವಾಗಿ ಇಲ್ಲಿನ ಛಾಯಾಗ್ರಾಹಕರೇ ತೆಗೆದ ಚಿತ್ರಗಳನ್ನು ಬಳಸಿಕೊಂಡು, ಉತ್ತಮವಾಗಿ ಮುದ್ರಿಸಲು ಆರಂಭಿಸಿದವು. ಅವು ಜನಸಾಮಾನ್ಯರ ಕೈಗೆಟಕುವ ಬೆಲೆಯಲ್ಲೂ ಇರುತ್ತಿದ್ದವು.

'ಮೈಸೂರಿಗೆ ಭೇಟಿ ಕೊಡುವ ಪ್ರವಾಸಿಗರು ಕಡಿಮೆ ಬೆಲೆಗೆ ಸಿಗುತ್ತಿದ್ದ ಪಿಕ್ಚರ್ ಪೋಸ್ಟ್ ಕಾರ್ಡ್‌ಗಳನ್ನು ಖರೀದಿಸಿ ತಮ್ಮ ಬಂಧುಮಿತ್ರರಿಗೆ ಕಳಿಸುತ್ತಿದ್ದರು. ಇದರಿಂದಾಗಿ, ಮೈಸೂರು ವಿದೇಶಗಳಲ್ಲೂ ಜನಪ್ರಿಯವಾಗಲು ಸಾಧ್ಯವಾಯಿತು' ಎನ್ನುತ್ತಾರೆ ಮೈಸೂರು ಪಿಕ್ಚರ್ ಪೋಸ್ಟ್ ಕಾರ್ಡುಗಳ ಬಗೆಗೆ ವಿಶೇಷ ಅಧ್ಯಯನ ನಡೆಸುತ್ತಿರುವ ಅಖಿಲ್ ರೆಡ್ಡಿ. ಎಂಟ್ಹತ್ತು ವರ್ಷಗಳ ಹಿಂದೆ ಹಿರಿಯ ಅಂಚೆ ಚೀಟಿ ಸಂಗ್ರಾಹಕ ಸುಶೀಲ್ ಮೆಹ್ರಾ ಅವರು ಕೊಟ್ಟ ಎರಡು ಮೈಸೂರು ಪಿಕ್ಚರ್ ಕಾರ್ಡ್‌ಗಳಿಂದ ಆಕರ್ಷಿತರಾಗಿ, ಮೈಸೂರು ಪಿಕ್ಚರ್ ಕಾರ್ಡ್ ಅಧ್ಯಯನ ಶುರು ಮಾಡಿದ ಅಖಿಲ್ ಅವರ ಬಳಿ ಈಗ ಮೈಸೂರಿಗೆ ಸಂಬಂಧಿಸಿದ 400ಕ್ಕೂ ಹೆಚ್ಚು ಬಗೆಯ ಕಾರ್ಡುಗಳಿವೆ. ಅಂದಹಾಗೆ, ವೃತ್ತಿಯಿಂದ ಅಖಿಲ್ ಸಾಫ್ಟ್‌ವೇರ್ ಎಂಜಿನಿಯರ್.

ಪಿಕ್ಚರ್ ಕಾರ್ಡ್‌ಗಳ ಹುಡುಕಾಟದ ಜತೆಜತೆಗೆ ಮೈಸೂರಿನ ಕಟ್ಟಡ, ವ್ಯಕ್ತಿ–ಘಟನೆಗಳನ್ನು ಶೋಧಿಸಿ ದಾಖಲು ಮಾಡುತ್ತಿರುವ ಅಖಿಲ್, ಈಗಾಗಲೇ ಮೈಸೂರು ಪಿಕ್ಚರ್ ಕಾರ್ಡ್‌ಗಳ ಪ್ರದರ್ಶನ ಮಾಡಿ ಪುರಸ್ಕಾರಗಳನ್ನು ಪಡೆದಿದ್ದು, ಪ್ರಸ್ತುತ ಮೈಸೂರು ಸಚಿತ್ರ ಕಾರ್ಡುಗಳನ್ನು ಕುರಿತ ಪುಸ್ತಕ ಹೊರತರುವ ಸಿದ್ಧತೆಯಲ್ಲಿದ್ದಾರೆ. ಶಾಲಾ ಮಕ್ಕಳಿಗೆ, ಯುವ ಸಮೂಹಕ್ಕೆ ಪಿಕ್ಚರ್ ಕಾರ್ಡುಗಳು ಮೈಸೂರಿನ ಭವ್ಯ ಇತಿಹಾಸವನ್ನು ಪರಿಚಯಿಸುತ್ತವೆ ಎನ್ನುವ ನಂಬಿಕೆ ಅಖಿಲ್ ಅವರದು.

ಪ್ರತಿಕ್ರಿಯಿಸಿ: feedback@sudha.co.in